ಕರ್ನಾಟಕ ಸರ್ಕಾರ

ಸಂ: ಆಇ 83 ವೆಚ್ಚ 6/2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20.4.2020

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು-560001

ಇವರಿಗೆ:
ಆಯುಕ್ತರು,
ಖಜಾನೆ ಆಯುಕ್ತಾಲಯ,
ನೆಲಮಹಡಿ, ಪೋಡಿಯಂ ಬ್ಲಾಕ್,
ಡಾ: ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು

ಮಾನ್ಯರೆ,

ವಿಷಯ: ಹೊಸ ತಾಲ್ಲೂಕು ಪಂಚಾಯತಿ/ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳ ವೇತನ/ಮತ್ತಿತರೆ ವೆಚ್ಚದ ಬಿಲ್ಲುಗಳನ್ನು ಮಾನ್ಯ ಮಾಡುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಹೊಸದಾಗಿ ಸೃಜಿಸಲಾಗಿರುವ ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯತಿಗಳು ದಿನಾಂಕ:1.4.2020ರಿಂದ ಪ್ರಾರಂಭವಾಗಬೇಕಾಗಿದ್ದು ಅವುಗಳಿಗೆ ಅಗತ್ಯವಿರುವ ವೇತನ/ವೇತನೇತರ ವೆಚ್ಚಕ್ಕಾಗಿ ಅನುದಾನವನ್ನು ಒದಗಿಸಬೇಕಾಗಿರುತ್ತದೆ. ಆದರೆ 2020-21ನೇ ಸಾಲಿನ ಆಯವ್ಯಯ ತಯಾರಿಕೆಯ ವೇಳೆಯೊಳಗೆ ಸಂಬಂಧಿಸಿದ ಹೊಸ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಖಜಾನೆಗಳಲ್ಲಿ ಹೊಸ ನಿಧಿ ಲೆಕ್ಕಗಳನ್ನು ತೆರೆಯುವುದು, ಪ್ರಸ್ತುತ ಇರುವ ನಿಧಿ ಲೆಕ್ಕಗಳಿಂದ ಅನುದಾನವನ್ನು ವರ್ಗಾಯಿಸುವ ಮತ್ತು ಹೊಸ ಡಿಡಿಓ ಕೋಡ್ ಪಡೆಯುವ ಪ್ರಕ್ರಿಯೆಯು ಪೂರ್ಣಗೊಂಡಿರದ ಕಾರಣ ಲಿಂಕ್ ಡಾಕ್ಯುಮೆಂಟ್ ನಲ್ಲಿ ಕೆ.ಜಿ.ಎಫ್. ತಾಲ್ಲೂಕು ಹೊರತುಪಡಿಸಿ ಹೊಸ ತಾಲ್ಲೂಕು ಪಂಚಾಯತಿಗಳಿಗೆ ಅನುದಾನವನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಈ ಹಿಂದೆ ಸೆಳಯುತ್ತಿದ್ದ ತಾಲ್ಲೂಕು ಪಂಚಾಯತಿಗಳಿಗೆ ಹೊಸ ತಾಲ್ಲೂಕು ಪಂಚಾಯತಿಗಳ ಅನುದಾನವನ್ನು ಒದಗಿಸಲಾಗಿದೆ.

ಆದ್ದರಿಂದ ಹೊಸ ತಾಲ್ಲೂಕು ಪಂಚಾಯತಿಗಳ ಹಣ ಸೆಳೆಯುವ ಅಧಿಕಾರಿಗಳು ಈ ಹಿಂದಿನ ತಾಲ್ಲೂಕು ಪಂಚಾಯತಿಗಳಡಿಯೇ ಹಿಂದಿನಂತೆಯೇ ವೇತನ/ವೇತನೇತರ ವೆಚ್ಚವನ್ನು ಭರಿಸಲು ಈ ಹಿಂದಿನ ತಾಲ್ಲೂಕು ಪಂಚಾಯತಿಗಳಲ್ಲಿ ಪ್ರಸ್ತುತ ವರ್ಷದಲ್ಲಿ ಸೆಳೆಯುವಂತೆ ಆರ್ಥಿಕ ಇಲಾಖೆಯ ವೆಬ್ ಸೈಟ್ ನ ತಾಲ್ಲೂಕು ಪಂಚಾಯತಿ ಲಿಂಕ್ ಡಾಕ್ಯುಮೆಂಟಿನ ಪ್ರಥಮ ಹಾಳೆಯಲ್ಲಿ ನಮೂದಿಸಲಾಗಿದೆ. ಈ ರೀತಿ ಹಣ ಸೆಳೆಯಲು ತಿಳಿಸಲಾಗಿದ್ದು, ಮುಂದಿನ ಆದೇಶದವರೆಗೆ ಇದೇ ರೀತಿ ಅನುಸರಿಸಬೇಕಾಗಿರುತ್ತದೆ.

ಆದ್ದರಿಂದ ಹೊಸ ತಾಲ್ಲೂಕು ಪಂಚಾಯತಿಗಳು (ಕೆ.ಜಿ.ಎಫ್. ಹೊರತುಪಡಿಸಿ) ಪ್ರಸ್ತುತ ಅಂದರೆ ಈ ಹಿಂದೆ ಉಪ ಖಜಾನೆಗಳಿಂದ ಸೆಳೆಯಲಾಗುತ್ತಿದ್ದಂತೆ ವೇತನ/ವೇತನೇತರ ಬಿಲ್ಲುಗಳನ್ನು ಸೆಳೆಯಲು ಮಾನ್ಯ ಮಾಡುವಂತೆ ಸಂಬಂಧಿಸಿದ ಖಜಾನೆಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ತಮ್ಮನ್ನು ಕೋರುತ್ತೇನೆ.

ತಮ್ಮ ನಂಬುಗೆಯ,

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಪ್ರತಿಯನ್ನು: 1. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪ. ಇಲಾಖೆ
2. ಹೊಸ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು } ರವರುಗಳ ಮಾಹಿತಿಗಾಗಿ